IslamHouse.com

# ಇಸ್ರಾಅ್ ಮತ್ತು ಮಿಅ್‌ರಾಜ್ ಆಚರಿಸುವುದರ ವಿಧಿ

[ Kannada – ಕನ್ನಡ – الكنادي ]

ಶೈಖ್ ಅಬ್ದುಲ್ ಅಝೀಝ್ ಇಬ್ನ್ ಅಬ್ದುಲ್ಲಾಹ್ ಇಬ್ನ್ ಬಾಝ್

ಅನುವಾದ: ಮುಹಮ್ಮದ್ ಹಂಝ ಪುತ್ತೂರು

ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

IslamHouse.com

# حُكْمُ الاِحْتِفَالِ بِلَيْلَةِ الْإِسْرَاءِ وَالْمِعْرَاجِ

الشيخ عبدالعزيز بن عبدالله بن باز

ترجمة: محمد حمزة البوتوري

مراجعة: عبد السلام كاتيبلا

# ಇಸ್ರಾಅ್ ಮತ್ತು ಮಿಅ್‌ರಾಜ್ ಆಚರಿಸುವುದರ ವಿಧಿ

ಸರ್ವಸ್ತುತಿ ಅಲ್ಲಾಹನಿಗೆ ಮೀಸಲು. ಅಲ್ಲಾಹನ ರಸೂಲರ(ﷺ) ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಸಲಾತ್ ಮತ್ತು ಸಲಾಂ ಇರಲಿ.

ಮುಂದುವರಿದು ಹೇಳುವುದೇನೆಂದರೆ,

ಇಸ್ರಾಅ್ ಮತ್ತು ಮಿಅ್‌ರಾಜ್ ಅಲ್ಲಾಹನ ಮಹಾ ದೃಷ್ಟಾಂತಗಳಲ್ಲಿ ಒಳಪಟ್ಟದ್ದು ಎಂಬ ವಿಷಯದಲ್ಲಿ ಯಾವುದೇ ಸಂಶಯವಿಲ್ಲ. ಅದು ಅಲ್ಲಾಹನ ರಸೂಲರ(ﷺ) ಸತ್ಯಸಂಧತೆಯನ್ನು ಮತ್ತು ಅಲ್ಲಾಹನ ಬಳಿ ಅವರಿಗೆ ಮಹಾ ಸ್ಥಾನಮಾನವಿರುವುದನ್ನು ಸೂಚಿಸುತ್ತದೆ. ಹಾಗೆಯೇ ಅದು ಅಲ್ಲಾಹನ ಅಪ್ರತಿಮ ಶಕ್ತಿಸಾಮರ್ಥ್ಯವನ್ನು ಸೂಚಿಸುವುದರೊಂದಿಗೆ, ಅಲ್ಲಾಹು ಅವನ ಸೃಷ್ಟಿಗಳೆಲ್ಲರ ಮೇಲ್ಭಾಗದಲ್ಲಿದ್ದಾನೆಂಬುದನ್ನೂ ಸೂಚಿಸುತ್ತದೆ. ಅಲ್ಲಾಹು ಹೇಳುತ್ತಾನೆ:

﴿سُبْحَٰنَ ٱلَّذِىٓ أَسْرَىٰ بِعَبْدِهِۦ لَيْلًا مِّنَ ٱلْمَسْجِدِ ٱلْحَرَامِ إِلَى ٱلْمَسْجِدِ ٱلْأَقْصَا ٱلَّذِى بَٰرَكْنَا حَوْلَهُۥ لِنُرِيَهُۥ مِنْ ءَايَٰتِنَآ ۚ إِنَّهُۥ هُوَ ٱلسَّمِيعُ ٱلْبَصِيرُ ۝١﴾ [الإسراء: 1].

“ರಾತ್ರಿ ಸಮಯದಲ್ಲಿ ತನ್ನ ದಾಸನನ್ನು ಹರಂ ಮಸೀದಿಯಿಂದ, ನಾವು ಸುತ್ತಮುತ್ತಲೂ ಬರಕತ್ ತುಂಬಿರುವ ಅಕ್ಸಾ ಮಸೀದಿಗೆ, ಅವರಿಗೆ ನಮ್ಮ ದೃಷ್ಟಾಂತಗಳನ್ನು ತೋರಿಸುವುದಕ್ಕಾಗಿ, ನಿಶಾ ಪ್ರಯಾಣ ಮಾಡಿಸಿದವನು ಸರ್ವನ್ಯೂನತೆಗಳಿಂದ ಪರಿಶುದ್ಧನು. ಖಂಡಿತವಾಗಿಯೂ ಅವನು ಎಲ್ಲವನ್ನೂ ಕೇಳುವವನೂ, ಎಲ್ಲವನ್ನೂ ಕಾಣುವವನೂ ಆಗಿರುವನು.” [ಅಲ್‌ಇಸ್ರಾಅ್ 1]

ಹದೀಸುಗಳಲ್ಲಿ ಮುತವಾತಿರ್ ಆಗಿ ವರದಿಯಾಗಿರುವ ಪ್ರಕಾರ ಪ್ರವಾದಿ(ﷺ)ರವರನ್ನು ಆಕಾಶಕ್ಕೆ ಕರೆದೊಯ್ಯಲಾಯಿತು. ಅವರಿಗೆ ಆಕಾಶಗಳ ಬಾಗಿಲುಗಳನ್ನು ತೆರೆದುಕೊಡಲಾಯಿತು. ಹೀಗೆ ಅವರು ಏಳನೇ ಆಕಾಶವನ್ನು ದಾಟಿದರು. ಆಗ ಅವರ ರಬ್ಬ್ ಅವರೊಂದಿಗೆ ಅವನು ಉದ್ದೇಶಿಸಿದ್ದನ್ನು ಮಾತನಾಡಿದನು. ಅವರಿಗೆ ಐದು ವೇಳೆಯ ನಮಾಝ್‌ಗಳನ್ನು ಕಡ್ಡಾಯಗೊಳಿಸಿದನು. ಅಲ್ಲಾಹು ಮೊಟ್ಟಮೊದಲು ಐವತ್ತು ವೇಳೆಯ ನಮಾಝ್‌ಗಳನ್ನು ಕಡ್ಡಾಯಗೊಳಿಸಿದ್ದನು. ಆದರೆ ಪ್ರವಾದಿ(ﷺ)ರವರು ಮತ್ತೆ ಮತ್ತೆ ಪುನರ್ ಪರಿಶೀಲಿಸಲು ಬೇಡಿಕೆಯಿಟ್ಟಾಗ ಕೊನೆಗೆ ಅವುಗಳನ್ನು ಐದಕ್ಕೆ ಇಳಿಸಲಾಯಿತು. ಅವು ಸಂಖ್ಯೆಯಲ್ಲಿ ಐದಾಗಿದ್ದರೂ ಪುಣ್ಯದಲ್ಲಿ ಐವತ್ತು ಆಗಿದೆ. ಕಾರಣ, ಪ್ರತಿಯೊಂದು ಸತ್ಕರ್ಮಕ್ಕೂ ಅದರ ಹತ್ತು ಪಟ್ಟು ಪುಣ್ಯವಿದೆ. ಅಲ್ಲಾಹನಿಗೆ ಸರ್ವಸ್ತುತಿ.

ಇಸ್ರಾಅ್ ಮತ್ತು ಮಿಅ್‌ರಾಜ್ ಜರುಗಿದ ರಾತ್ರಿ ಯಾವುದು? ಅದು ರಜಬ್ ತಿಂಗಳಲ್ಲೋ ಅಥವಾ ಇತರ ತಿಂಗಳುಗಳಲ್ಲೋ ಎಂಬ ಬಗ್ಗೆ ಸಹೀಹಾದ ಹದೀಸ್ ವರದಿಯಾಗಿಲ್ಲ. ಹದೀಸ್ ವಿದ್ವಾಂಸರ ಪ್ರಕಾರ ಈ ವಿಷಯದಲ್ಲಿ ವರದಿಯಾದ ಹದೀಸ್‌ಗಳಲ್ಲಿ ಯಾವುದೂ ಪ್ರವಾದಿ(ﷺ)ರವರ ಹದೀಸ್ ಎಂದು ದೃಢಪಟ್ಟಿಲ್ಲ. ಇಸ್ರಾಅ್ ಮತ್ತು ಮಿಅ್‌ರಾಜ್ ಜರುಗಿದ ರಾತ್ರಿಯನ್ನು ಸಹಾಬಾಗಳು ಮರೆತುಬಿಡುವಂತೆ ಮಾಡಿದ್ದರಲ್ಲಿ ಅಲ್ಲಾಹನಿಗೆ ಯಾವುದಾದರೂ ಮಹಾ ಯುಕ್ತಿಯಿರಬಹುದು.

ಇನ್ನು ಅದು ಇಂತಿಂತಹ ರಾತ್ರಿಯೆಂದು ದೃಢಪಟ್ಟರೂ ಸಹ ಯಾವುದಾದರೂ ಇಬಾದತ್ ನಿರ್ವಹಿಸುವ ಮೂಲಕ ಆ ರಾತ್ರಿಯನ್ನು ಪ್ರತ್ಯೇಕಗೊಳಿಸಲು ಮುಸ್ಲಿಮರಿಗೆ ಅನುಮತಿಯಿಲ್ಲ. ಹಾಗೆಯೇ ಅದನ್ನು ಆಚರಿಸಲೂ ಅನುಮತಿಯಿಲ್ಲ. ಕಾರಣ,

ಪ್ರವಾದಿ(ﷺ)ರವರಾಗಲಿ, ಸಹಾಬಾಗಳಾಗಲಿ ಅದನ್ನು ಆಚರಿಸಿಲ್ಲ. ಆ ರಾತ್ರಿಯಲ್ಲಿ ಪ್ರತ್ಯೇಕ ಇಬಾದತ್ ನಿರ್ವಹಿಸಿಲ್ಲ.

ಒಂದು ವೇಳೆ ಇಸ್ರಾಅ್ ಮತ್ತು ಮಿಅ್‌ರಾಜ್ ಸಂಭವಿಸಿದ ರಾತ್ರಿಯನ್ನು ಆಚರಿಸುವುದು ಧರ್ಮದಲ್ಲಿ ಒಳಪಟ್ಟಿದ್ದರೆ ಅಲ್ಲಾಹನ ರಸೂಲರು(ﷺ) ಅದನ್ನು ಮಾತಿನ ಮೂಲಕವೋ ಆಚರಣೆಯ ಮೂಲಕವೋ ನಮಗೆ ವಿವರಿಸಿಕೊಡುತ್ತಿದ್ದರು. ಅವರೇನಾದರೂ ಹಾಗೆ ವಿವರಿಸಿಕೊಟ್ಟಿರುತ್ತಿದ್ದರೆ ಅದನ್ನು ಸಹಾಬಾಗಳು ನಮಗೆ ತಲುಪಿಸಿಕೊಡುತ್ತಿದ್ದರು. ಅವರು ಪ್ರವಾದಿ(ﷺ)ರವರ ಪ್ರತಿಯೊಂದು ಮಾತು ಮತ್ತು ಕ್ರಿಯೆಯನ್ನು ನಮಗೆ ತಲುಪಿಸಿಕೊಟ್ಟಿದ್ದಾರೆ. ಮಾತ್ರವಲ್ಲ, ಅಂತಹ ಒಂದು ಆಚರಣೆಯಿರುತ್ತಿದ್ದರೆ ಅವರೇ ಮುಂದಾಗಿ ಅದನ್ನು ಆಚರಿಸುತ್ತಿದ್ದರು. ಕಾರಣ, ಒಳಿತಿನ ವಿಷಯಗಳಲ್ಲಿ ಅವರು ಮುಂಚೂಣಿಯಲ್ಲಿರುವವರಾಗಿದ್ದಾರೆ.

ಇಸ್ರಾಅ್ ಮತ್ತು ಮಿಅ್‌ರಾಜ್ ಸಂಭವಿಸಿದ ರಾತ್ರಿಯನ್ನು ಆಚರಿಸುವುದು ಧರ್ಮದಲ್ಲಿ ಒಳಪಟ್ಟಿರುತ್ತಿದ್ದರೆ ಮೊಟ್ಟಮೊದಲು ಸಹಾಬಾಗಳು ಅದನ್ನು ಆಚರಿಸುತ್ತಿದ್ದರು. ಆದರೆ ಅವರಾರೂ ಅದನ್ನು ಆಚರಿಸಿಲ್ಲ. ಆದುದರಿಂದ ಅದು ಧರ್ಮದಲ್ಲಿ ಸೇರಿದ್ದಲ್ಲ ಎನ್ನುವುದು ಸ್ಪಷ್ಟ. ಆ ರಾತ್ರಿಯನ್ನು ಗೌರವಿಸುವುದು ಇಸ್ಲಾಮಿನಲ್ಲಿ ಒಳಪಟ್ಟದ್ದಲ್ಲ. ಪ್ರವಾದಿ(ﷺ)ರವರು ಬದುಕಿರುವಾಗಲೇ ಅಲ್ಲಾಹು ಧರ್ಮವನ್ನು ಪೂರ್ಣಗೊಳಿಸಿದ್ದಾನೆ. ಅವನ ಅನುಗ್ರಹವನ್ನೂ ಪೂರ್ತಿಗೊಳಿಸಿದ್ದಾನೆ. ಧರ್ಮದಲ್ಲಿಲ್ಲದ ಒಂದು ವಿಷಯವನ್ನು ಧರ್ಮದಲ್ಲಿ ಸೇರ್ಪಡೆಗೊಳಿಸಲು ಅವನು ಯಾರಿಗೂ ಅಧಿಕಾರ ನೀಡಿಲ್ಲ. ಅಲ್ಲಾಹು ಹೇಳುತ್ತಾನೆ:

﴿ٱلۡيَوۡمَ أَكۡمَلۡتُ لَكُمۡ دِينَكُمۡ وَأَتۡمَمۡتُ عَلَيۡكُمۡ نِعۡمَتِي وَرَضِيتُ لَكُمُ ٱلۡإِسۡلَٰمَ دِينٗاۚ﴾ [المائدة: 3] .

“ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ಣಗೊಳಿಸಿದ್ದೇನೆ. ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಪೂರ್ತಿಗೊಳಿಸಿದ್ದೇನೆ. ಇಸ್ಲಾಮನ್ನು ನಿಮಗೆ ಒಂದು ಧರ್ಮವಾಗಿ ನಾನು ತೃಪ್ತಿಪಟ್ಟಿದ್ದೇನೆ.” [ಅಲ್‌ಮಾಇದಃ 3]

ಅಲ್ಲಾಹು ಹೇಳುತ್ತಾನೆ:

﴿أَمۡ لَهُمۡ شُرَكَٰٓؤُاْ شَرَعُواْ لَهُم مِّنَ ٱلدِّينِ مَا لَمۡ يَأۡذَنۢ بِهِ ٱللَّهُۚ وَلَوۡلَا كَلِمَةُ ٱلۡفَصۡلِ لَقُضِيَ بَيۡنَهُمۡۗ وَإِنَّ ٱلظَّٰلِمِينَ لَهُمۡ عَذَابٌ أَلِيمٞ ٢١﴾

[الشورى: 21] .

“ಅಲ್ಲಾಹು ಅನುಮತಿ ನೀಡದಂತಹ ವಿಷಯಗಳನ್ನು ಧರ್ಮದಲ್ಲಿ ನಿಯಮವನ್ನಾಗಿ ಮಾಡುವ ಯಾವುದಾದರೂ ಸಹಭಾಗಿಗಳು ಅವರಿಗಿದ್ದಾರೋ? ವಿಚಾರಣಾದಿನದ ವಾಗ್ದಾನವು ಇಲ್ಲದಿರುತ್ತಿದ್ದರೆ ಅವರ ಮಧ್ಯೆ ಈಗಾಗಲೇ ತೀರ್ಪು ನೀಡಲಾಗಿರುತ್ತಿತ್ತು. ಖಂಡಿತವಾಗಿಯೂ ಅನ್ಯಾಯವೆಸಗುವವರಿಗೆ ವೇದನಾಜನಕ ಶಿಕ್ಷೆಯಿದೆ.” [ಅಶ್ಶೂರಾ 21]

ಪ್ರವಾದಿ(ﷺ)ರವರು ಬಿದ್‌ಅತ್‌ಗಳ ಬಗ್ಗೆ ಎಚ್ಚರಿಕೆ ನೀಡಿದ್ದು ಮತ್ತು ಅವುಗಳನ್ನು ಪಥಭ್ರಷ್ಟತೆಯೆಂದು ಕರೆದಿರುವುದು ಸಹೀಹಾದ ಹದೀಸ್‌ಗಳಲ್ಲಿ ವರದಿಯಾಗಿದೆ. ಇದು ಬಿದ್‌ಅತ್‌ಗಳ ಅಪಾಯದ ಬಗ್ಗೆ ಸಮುದಾಯಕ್ಕೆ ಎಚ್ಚರಿಕೆ ನೀಡುವುದಕ್ಕಾಗಿದೆ. ಅವುಗಳನ್ನು ಎಸಗದಂತೆ ತಾಕೀತು ನೀಡುವುದಕ್ಕಾಗಿದೆ.

عَنْ عَائِشَةَ رَضِيَ اللَّهُ عَنْهَا، عَنِ النَّبِيِّ صَلَّى اللَّهُ عَلَيْهِ وَسَلَّمَ أَنَّهُ قَالَ: «مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ»

ಆಯಿಶಾ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: "ನಮ್ಮ ಈ ಧರ್ಮದ ವಿಷಯದಲ್ಲಿ ಯಾರಾದರೂ ಅದರಲ್ಲಿಲ್ಲದ ಒಂದನ್ನು ಹೊಸದಾಗಿ ನಿರ್ಮಿಸುವುದಾದರೆ ಅದು ತಿರಸ್ಕೃತ."[1]

ಇನ್ನೊಂದು ವರದಿಯಲ್ಲಿ:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ».

"ನಮ್ಮ ಆಜ್ಞೆಯಿಲ್ಲದ ಒಂದು ಕಾರ್ಯವನ್ನು ಯಾರಾದರೂ ಮಾಡಿದರೆ ಅದು ತಿರಸ್ಕೃತವಾಗಿದೆ."[2]

عَنْ جَابِرٍ رَضِيَ اللَّهُ عَنْهُ قَالَ: كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَقُولُ فِي خُطْبَتِهِ يَوْمَ الْجُمُعَةِ: «أَمَّا بَعْدُ، فَإِنَّ خَيْرَ الْحَدِيثِ كِتَابُ اللَّهِ، وَخَيْرَ الْهَدْيِ هَدْيُ مُحَمَّدٍ صَلَّى اللَّهُ عَلَيْهِ وَسَلَّمَ، وَشَرَّ الْأُمُورِ مُحْدَثَاتُهَا، وَكُلَّ بِدْعَةٍ ضَلَالَةٌ»

ಜಾಬಿರ್(ﷺ)ರಿಂದ ವರದಿ: ಪ್ರವಾದಿ(ﷺ)ರವರು ಶುಕ್ರವಾರ ಖುತುಬ ನಿರ್ವಹಿಸುವಾಗ ಹೀಗೆ ಹೇಳುತ್ತಿದ್ದರು: "ಮಾತುಗಳಲ್ಲಿ ಅತ್ಯುತ್ತಮವಾದುದು ಅಲ್ಲಾಹನ ಗ್ರಂಥ. ಚರ್ಯೆಗಳಲ್ಲಿ

[1] ಅಲ್‌ಬುಖಾರಿ (2550); ಮುಸ್ಲಿಂ (1718); ಅಬೂ ದಾವೂದ್ (4606); ಇಬ್ನ್ ಮಾಜ (14); ಅಹ್ಮದ್ (6/270)

[2] ಮುಸ್ಲಿಂ (1718); ಅಹ್ಮದ್ (6/256)

ಅತ್ಯುತ್ತಮವಾದುದು ಮುಹಮ್ಮದ್(ﷺ)ರವರ ಚರ್ಯೆ. ಕಾರ್ಯಗಳಲ್ಲಿ ಅತಿನಿಕೃಷ್ಟವಾದುದು ನೂತನಾಚಾರಗಳು. ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ.”[3]

ಅನ್ನಸಾಈಯಲ್ಲಿರುವ ಹೆಚ್ಚುವರಿ ಹೀಗಿದೆ:

«وَكُلَّ ضَلَالَةٍ فِي النَّارِ».

“ಎಲ್ಲ ಪಥಭ್ರಷ್ಟತೆಗಳೂ ನರಕಾಗ್ನಿಗೆ ಒಯ್ಯುತ್ತದೆ.”[4]

عَنِ الْعِرْبَاضِ بْنِ سَارِيَةَ رَضِيَ اللَّهُ عَنْهُ، أَنَّهُ قَالَ: وَعَظَنَا رَسُولُ اللَّهِ صَلَّى اللَّهُ عَلَيْهِ وَسَلَّمَ مَوْعِظَةً بَلِيغَةً وَجِلَتْ مِنْهَا الْقُلُوبُ وَذَرَفَتْ مِنْهَا الْعُيُونُ، فَقُلْنَا: يَا رَسُولَ اللَّهِ، كَأَنَّهَا مَوْعِظَةُ مُوَدِّعٍ! فَأَوْصِنَا. فَقَالَ: «أُوصِيكُمْ بِتَقْوَى اللَّهِ وَالسَّمْعِ وَالطَّاعَةِ وَإِنْ تَأَمَّرَ عَلَيْكُمْ عَبْدٌ، فَإِنَّهُ مَنْ يَعِشْ مِنْكُمْ فَسَيَرَى اخْتِلَافًا كَثِيرًا، فَعَلَيْكُمْ بِسُنَّتِي وَسُنَّةِ الْخُلَفَاءِ الرَّاشِدِينَ الْمَهْدِيِّينَ مِنْ بَعْدِي، تَمَسَّكُوا بِهَا وَعَضُّوا عَلَيْهَا بِالنَّوَاجِذِ، وَإِيَّاكُمْ وَمُحْدَثَاتِ الْأُمُورِ، فَإِنَّ كُلَّ مُحْدَثَةٍ بِدْعَةٌ، وَكُلَّ بِدْعَةٍ ضَلَالَةٌ».

ಇರ್ಬಾದ್ ಇಬ್ನ್ ಸಾರಿಯಃ(ﷺ)ರಿಂದ ವರದಿ: ಒಮ್ಮೆ ಪ್ರವಾದಿ(ﷺ)ರವರು ನಮಗೆ ಮನದಾಳದಿಂದ ಒಂದು

[3] ಮುಸ್ಲಿಂ (867); ಅನ್ನಸಾಈ (1578); ಅಬೂ ದಾವೂದ್ (2954); ಇಬ್ನ್ ಮಾಜ (45); ಅಹ್ಮದ್ (3/371); ಅದ್ದಾರಿಮೀ (206)
[4] ಅನ್ನಸಾಈ (1578)

ಉಪದೇಶವಿತ್ತರು. ಆ ಉಪದೇಶ ಕೇಳಿದಾಗ ನಮ್ಮ ಹೃದಯಗಳು ನಡುಗಿದವು. ನಮ್ಮ ಕಣ್ಣುಗಳಿಂದ ಕಣ್ಣೀರು ಹರಿಯಿತು. ನಾವು ಕೇಳಿದೆವು: "ಓ ಅಲ್ಲಾಹನ ರಸೂಲರೇ! ಇದು ವಿದಾಯ ಕೋರುವವನ ಉಪದೇಶದಂತೆ ಇದೆಯಲ್ಲವೇ. ಆದುದರಿಂದ ತಾವು ನಮಗೆ ಏನನ್ನು ಆದೇಶಿಸುತ್ತೀರಿ?" ಆಗ ಅವರು ಹೇಳಿದರು: "ಅಲ್ಲಾಹನನ್ನು ಭಯಪಟ್ಟು ಜೀವಿಸಬೇಕೆಂದು ಮತ್ತು ನಿಮ್ಮ ಮೇಲೆ ಆಡಳಿತ ನಡೆಸುವುದು ಒಬ್ಬ ದಾಸನಾಗಿದ್ದರೂ ಅವನ ಮಾತನ್ನು ಕೇಳಬೇಕು ಮತ್ತು ಅವನ ಆಜ್ಞೆಯನ್ನು ಅನುಸರಿಸಬೇಕೆಂದು ನಾನು ನಿಮಗೆ ಆದೇಶಿಸುತ್ತಿದ್ದೇನೆ. ನನ್ನ ಮರಣಾನಂತರ ನಿಮ್ಮಲ್ಲಿ ಯಾರಾದರೂ ಬದುಕಿದ್ದರೆ ಅವರು ಅನೇಕ ಭಿನ್ನಮತಗಳನ್ನು ಕಾಣುವರು. ಆಗ ನೀವು ನನ್ನ ಸುನ್ನತ್ತನ್ನು ಮತ್ತು ಸನ್ಮಾರ್ಗ ದಲ್ಲಿರುವ ನನ್ನ ಖುಲಫಾ ರಾಶಿದೂನ್‌ಗಳ ಸುನ್ನತನ್ನು ಅನುಸರಿಸಿರಿ. ಅದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ ಮತ್ತು ದವಡೆ ಹಲ್ಲುಗಳಿಂದ ಕಚ್ಚಿಕೊಳ್ಳಿರಿ. ನೂತನಾಚಾರಗಳ ಬಗ್ಗೆ ಎಚ್ಚರವಾಗಿರಿ. ಯಾಕೆಂದರೆ ಎಲ್ಲ ನೂತನಾಚಾರವೂ ಬಿದ್‌ಅತ್ ಆಗಿದೆ. ಮತ್ತು ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ."[5]

ಇದೇ ಅರ್ಥವನ್ನು ಹೊಂದಿರುವ ಇನ್ನೂ ಅನೇಕ ಹದೀಸ್‌ಗಳಿವೆ. ಸಹಾಬಾಗಳು ಮತ್ತು ಸಲಫ್‌ಗಳು ಬಿದ್‌ಅತ್‌ಗಳ ಬಗ್ಗೆ ನಿರಂತರ ಎಚ್ಚರಿಕೆ ನೀಡಿದ್ದಾರೆ. ಏಕೆಂದರೆ ಬಿದ್‌ಅತ್‌ಗಳು ಧರ್ಮದಲ್ಲಿ ಸೇರ್ಪಡೆಗೊಳಿಸುವ ಹೊಸ ಆಚಾರಗಳು. ಅಲ್ಲಾಹು ಅವುಗಳನ್ನು ಧರ್ಮದಲ್ಲಿ ಸೇರಿಸಲು ಯಾರಿಗೂ ಅಧಿಕಾರ ನೀಡಿಲ್ಲ. ಯಹೂದರು ಮತ್ತು ಕ್ರೈಸ್ತರು ಕೂಡ ತಮ್ಮ ಧರ್ಮದಲ್ಲಿ ಅನೇಕ ಹೊಸ ಆಚರಣೆಗಳನ್ನು ಸೇರ್ಪಡೆಗೊಳಿಸಿದ್ದರು. ಇದು ಅವರ ಅನುಕರಣೆ ಯಾಗಿದೆ. ಮಾತ್ರವಲ್ಲ; ಬಿದ್‌ಅತ್‌ಗಳನ್ನು ಧರ್ಮದಲ್ಲಿ ಸೇರಿಸುವು

---

[5] ಅತ್ತಿರ್ಮಿದೀ (2676); ಅಬೂದಾವೂದ್ (4607); ಇಬ್ನ್ ಮಾಜ (42); ಅಹ್ಮದ್ (4/126); ಅದ್ದಾರಿಮೀ (95)

ದೆಂದರೆ ಧರ್ಮವು ಪೂರ್ಣವಾಗಿಲ್ಲ ಎಂದು ವಾದಿಸುವುದಕ್ಕೆ ಸಮಾನ.

ನಾನು ಇಲ್ಲಿ ಏನನ್ನು ತಿಳಿಸಿದ್ದೇನೋ ಅದು ಈ ಬಿದ್‌ಅತ್ತನ್ನು, ಅಂದರೆ ಇಸ್ರಾಅ್ ಮತ್ತು ಮಿಅ್‌ರಾಜ್ ಜರುಗಿದ ರಾತ್ರಿಯನ್ನು ಆಚರಿಸುವುದೆಂಬ ಬಿದ್‌ಅತ್ತನ್ನು ವಿರೋಧಿಸಲು ಮತ್ತು ಅದರ ಬಗ್ಗೆ ಎಚ್ಚರವಹಿಸಲು ಒಬ್ಬ ವ್ಯಕ್ತಿಗೆ ಧಾರಾಳ ಸಾಕೆಂದು ಭಾವಿಸುತ್ತೇನೆ. ಆ ಆಚರಣೆಗೂ ಧರ್ಮಕ್ಕೂ ಸ್ವಲ್ಪವೂ ಸಂಬಂಧವಿಲ್ಲ.

ಮುಸ್ಲಿಮರಿಗೆ ಹಿತವಚನ ನೀಡುವುದನ್ನು ಮತ್ತು ಧರ್ಮದ ನಿಯಮಗಳನ್ನು ವಿವರಿಸಿ ಕೊಡುವುದನ್ನು ಅಲ್ಲಾಹು ಕಡ್ಡಾಯಗೊಳಿಸಿ ರುವುದರಿಂದ, ಜ್ಞಾನವನ್ನು ಬಚ್ಚಿಡುವುದನ್ನು ನಿಷಿದ್ಧಗೊಳಿಸಿರುವು ದರಿಂದ, ಈ ಬಿದ್‌ಅತ್ತಿನ ಬಗ್ಗೆ ನನ್ನ ಮುಸ್ಲಿಂ ಸಹೋದರರಿಗೆ ಎಚ್ಚರಿಕೆ ನೀಡಲು ಬಯಸಿದೆ. ಈ ಬಿದ್‌ಅತ್ ಮುಸ್ಲಿಮರ ಮನಸ್ಸಿನಲ್ಲಿ ಎಲ್ಲಿಯ ತನಕ ಹಾಸುಹೊಕ್ಕಿದೆಯೆಂದರೆ ಕೆಲವರು ಇದನ್ನು ಧರ್ಮದ ಒಂದು ಭಾಗವೆಂದು ಭಾವಿಸಿದ್ದಾರೆ.

ಮುಸ್ಲಿಮರೆಲ್ಲರ ಸ್ಥಿತಿಯನ್ನು ಸುಧಾರಣೆಗೊಳಿಸಲು, ಅವರಿಗೆ ಧರ್ಮದ ವಿಷಯಗಳಲ್ಲಿ ಪಾಂಡಿತ್ಯವನ್ನು ದಯಪಾಲಿಸಲು, ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳುವ ಮತ್ತು ಅದರಲ್ಲಿ ಅಚಲವಾಗಿ ನಿಲ್ಲುವ, ಮತ್ತು ಧರ್ಮಕ್ಕೆ ವಿರುದ್ಧವಾಗಿರುವುದನ್ನು ವರ್ಜಿಸುವ ಸೌಭಾಗ್ಯವನ್ನು ನಮಗೂ ಅವರಿಗೂ ಕರುಣಿಸಲು ನಾನು ಅಲ್ಲಾಹನೊಂದಿಗೆ ಬೇಡುತ್ತೇನೆ. ಇವೆಲ್ಲವನ್ನೂ ಮಾಡುವ ಸಾಮರ್ಥ್ಯ ಅಲ್ಲಾಹನಿಗಿದೆ. ನಮ್ಮ ಪ್ರವಾದಿ ಮುಹಮ್ಮದ್(ﷺ)ರವರ ಮೇಲೂ, ಅವರ ಕುಟುಂಬದ ಮೇಲೂ, ಅವರ ಸಹಾಬಾಗಳ ಮೇಲೂ ಅಲ್ಲಾಹನ ಸಲಾತ್ ಮತ್ತು ಸಲಾಂ ಸದಾ ಇರಲಿ.

[ಮಜ್ಮೂಉ ಫತಾವಾ ಇಬ್ನ್ ಬಾಝ್ 1/183–185]

ಇಸ್ರಾಅ್ ಮತ್ತು ಮಿಅ್‌ರಾಜ್ ಆಚರಿಸುವುದಕ್ಕೆ ಇಸ್ಲಾಂ ಧರ್ಮದಲ್ಲಿ ಯಾವುದೇ ಪುರಾವೆಯಿಲ್ಲದಿರುವುದರಿಂದ ಅದನ್ನು ಆಚರಿಸುವುದು ಬಿದ್‌ಅತ್ ಆಗಿದೆಯೆಂದು ಲೇಖಕರು ಈ ಕೃತಿಯಲ್ಲಿ ವಿವರಿಸಿದ್ದಾರೆ.